# ಬದುಕು ಮತ್ತು ಬದಲಾವಣೆ



'ಬದಲಾವಣೆ' ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿದೆ. ನಮ್ಮಂತಹ ಅನಿವಾಸಿ ಭಾರತೀಯರಿಗೆ ಈ 'ಬದಲಾವಣೆ' ಊರಿನ ಜೀವನದ ಎಲ್ಲಾ ಸ್ತರಗಳಲ್ಲಿ ಅತ್ಯಂತ ಸ್ಪಷ್ಟವಾಗಿ ಗೋಚರವಾಗುತ್ತದೆ. ಸುಮಾರು ಹನ್ನೊಂದು ವರ್ಷಗಳ ಹಿಂದೆ ಬಿಟ್ಟು ಬಂದ ಊರನ್ನು ಇಂದಿನ ಊರಿನೊಂದಿಗೆ ತಾಳೆ ಹಾಕಿದಾಗ 'ಬದಲಾವಣೆ' ಮತ್ತು 'ಹೊಸತನದ' ಛಾಪು ಎಲ್ಲಾ ಕಡೆಗಳಲ್ಲೂ ಗೋಚರವಾಗುತ್ತದೆ.

ಕಾಲ ಖಂಡಿತವಾಗಿಯೂ ಬದಲಾಗುತ್ತದೆ. ನಿರಂತರ 'ಬದಲಾವಣೆ' ಕಾಲದ ಎಡೆಬಿಡದ ಪ್ರಕ್ರಿಯೆಯಾಗಿದೆ. ಆದರೆ ಕೆಲವೊಮ್ಮೆ ಕಾಲದೊಂದಿಗೆ ಮನುಷ್ಯ ಬದಲಾಗುವುದಿಲ್ಲ. ಸಣ್ಣ ಮಕ್ಕಳು ಮತ್ತು ಹದಿಹರೆಯದವರು ಬದಲಾವಣೆಗೆ ಒಗ್ಗಿಕೊಳ್ಳುವುದಿಲ್ಲ. 'ಬದಲಾವಣೆ'ಗೆ ಸಂಬಂಧಿಸಿದಂತೆ ಅವನು ಸದಾ ಪ್ರತಿರೋಧ ತೋರುತ್ತಾನೆ. ಏಕೆಂದರೆ ಅವನು ತಾನು ಹಿತವಾಗಿರುವ, ತನಗೆ ಒಗ್ಗಿ ಹೋಗಿರುವ ತನ್ನ ಆರಾಮದ ವಲಯ (ಅಠಿಟಜಿಠಿಡಿಣ ಚಿಠಿಟಿಜ)ದಿಂದ ಎಂದೂ ಹೊರ ಬರ ಬಯಸುವುದಿಲ್ಲ. ಅದು ಅವನ ಮಟ್ಟಿಗೆ ದೊಡ್ಡ ಸಾಹಸಕ್ಕೆ ಕೈ ಹಾಕುವುದಕ್ಕೆ ಸಮಾನವಾಗಿದೆ.

ಈ ಕಾರಣದಿಂದಲೇ ಒಂದು ವೇಳೆ ಮಾನವ ತಪ್ಪು ವಿಶ್ವಾಸ ಮತ್ತು ಕಂದಾಚಾರಗಳ ಸುಳಿಯಲ್ಲಿ ಸಿಲುಕಿ ಬದುಕುತ್ತಿದ್ದರೆ, ಹಾಗೆ ಬದುಕುವುದರಲ್ಲೇ ಅವನು ಸಂತೃಪ್ತಿ ಪಟ್ಟು ಕೊಳ್ಳಬಯಸುತ್ತಾನೆ. ಎಷ್ಟು ನಷ್ಟವನ್ನು ಸಹಿಸಿಯೂ ಅವನು ಅದರಲ್ಲೇ ಖುಷಿ ಪಟ್ಟು ಬದುಕುತ್ತಾನೆ. ನೈಜ ವಿಶ್ವಾಸ, ಉತ್ತಮ ಆದರ್ಶಗಳು ಅವನ ಮುಂದೆ ಅನಾವರಣಗೊಂಡರೂ ಅವನು ಅದನ್ನು ಸ್ವೀಕರಿಸುವ ಗೊಡವೆಗೆ ಹೋಗುವುದಿಲ್ಲ. ಏಕೆಂದರೆ ಈ 'ಬದಲಾವಣೆ' ಮತ್ತು 'ಹೊಸತನ' ವನ್ನು ಅಂಗೀಕರಿಸುವುದು ಅವನ ಮಟ್ಟಿಗೆ ಎದುರಿಸಲಾಗದ ಸಾಹಸವಾಗಿದೆ.

ಜೀವನದಲ್ಲಿ ಹೊಸ ಬದಲಾವಣೆಗಳನ್ನು ಸ್ವಾಗತಿಸಿ ಅದಕ್ಕನುಗುಣವಾಗಿ ಬದುಕುವುದು ಎಷ್ಟು ಮುಖ್ಯ ಎಂಬುದಕ್ಕೆ 'ಗಿಡುಗ ಪಕ್ಷಿ'ಯ ಜೀವನದಲ್ಲಿ ಅತ್ಯುತ್ತಮವಾದೊಂದು ಪಾಠವಿದೆ. ಇದರ ಸತ್ಯತೆಯನ್ನು ನಾನು ಧೃಡೀಕರಿಸಿಲ್ಲಾವಾದರೂ ಇದು ಅತ್ಯಂತ ಪಾಠ ಬೋಧಕ ಸಂದೇಶವನ್ನು ಹೊಂದಿದೆ. ಗಿಡುಗ ತನ್ನ ಜಾತಿಗೆ ಸೇರಿದ ಪಕ್ಷಿಗಳ ಪೈಕಿ ಅತಿ ಹೆಚ್ಚು ಆಯುಷ್ಯವಿರುವ ಪಕ್ಷಿಯಾಗಿದೆ. ಒಂದು ವಿಧದ ಗಿಡುಗ ಸುಮಾರು ವರ್ಷಗಳ ಕಾಲ ಬದುಕಬಲ್ಲದು. ಆದರೆ ಐವತ್ತು ವರ್ಷಗಳ ಸಾರ್ಥಕ ಬದುಕು ಬಾಳ ಬೇಕಾದರೆ ಅದು ತನ್ನನ್ನು ಹೊಸ ಬದಲಾವಣೆಗಳನ್ನು ಸ್ವೀಕರಿಸಲು ಸಿದ್ಧಗೊಳಿಸಿ ಕೊಳ್ಳಬೇಕಾಗುತ್ತದೆ. ತನ್ನ 'ಆರಾಮದ ವಲಯ'ವನ್ನು ಬಿಟ್ಟು ಹೊಸತನಕ್ಕೆ ತನ್ನನ್ನು ಒಗ್ಗಿಸಿಕೊಳ್ಳುವ ಕಠಿಣ ನಿರ್ಧಾರಗಳನ್ನು ತೆಳೆಯಬೇಕಾಗುತ್ತದೆ.

ಗಿಡುಗ ಪಕ್ಷಿಗೆ ಇಪ್ಪತ್ತೈದು ತುಂಬಿದಾಗ ಅದಕ್ಕೆ ಪ್ರಾಯಾಧಿಕ್ಯ ಭಾದಿಸತೊಡಗುತ್ತದೆ. ಆಗ ಅದಕ್ಕೆ ಭೇಟೆಯಾಡಲು ಬಹಳ ಅಗತ್ಯವಾದ ಅದರ ಉದ್ದ ಮತ್ತು ಹರಿತವಾದ ಕಾಲ ಉಗುರು ದುರ್ಬಲವಾಗುತ್ತವೆ. ಅದರ ಪ್ರಬಲವಾದ ಕೊಕ್ಕು ಪ್ರಯಾಧಿಕ್ಯದಿಂದಾಗಿ ವಕ್ರವಾಗಿ ಬಿಡುತ್ತದೆ. ಅದರ ರೆಕ್ಕೆಗಳು ದಟ್ಟವಾಗಿ ಬೆಳೆದ ಪುಕ್ಕಗಳಿಂದಾಗಿ ಭಾರವಾಗಿ ಹಾರಾಟಕ್ಕೆ ಅಡಚಣೆಯುಂಟು ಮಾಡತೊಡಗುತ್ತದೆ.

ಆಗ ಅದರ ಮುಂದಿರುವುದು ಎರಡೇ ಮಾರ್ಗ, ಒಂದೋ ವಾರ್ಧಕ್ಯದ ಬಾಧೆಗಳಿಗೆ ಶರಣು ಹೋಗಿ ಸತ್ತು ಹೋಗುವುದು ಅಥವಾ ಹೊಸ 'ಬದಲಾವಣೆ'ಗೆ ತನ್ನನ್ನು ಸಿದ್ಧಪಡಿಸಿ ಕೊಳ್ಳುವುದು. ಆದರೆ ಹೊಸ ಬದಲಾವಣೆಗಳಿಗೆ ತನ್ನನ್ನು ಸಿದ್ಧಪಡಿಸುವ ಈ ಪ್ರಕ್ರಿಯೆ ಅತ್ಯಂತ ಕಠಿಣತರಮವಾದ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆ ಪೂರ್ಣಗೊಳ್ಳಲು ಆರು ತಿಂಗಳು ಬೇನೆ ಅನುಭವಿಸಬೇಕಾಗುತ್ತದೆ ಕೊನೆಗೆ ಅದು ಬದಲಾವಣೆಯ ಪ್ರಕ್ರಿಯೆಯನ್ನು ಅಂಗೀಕರಿಸುವ ತೀರ್ಮಾನ ಮಾಡುತ್ತದೆ.

ಈ 'ಬದಲಾವಣೆ'ಯ ಪ್ರಕ್ರಿಯೆಯನ್ನು ಪೂರ್ತಿಗೊಳಿಸಲು ಗಿಡುಗ ಎತ್ತರವಾದ ಪರ್ವತ ಪ್ರದೇಶಕ್ಕೆ ಹಾರಿ ಹೋಗುತ್ತದೆ ಅನಂತರ ತನ್ನ ಹಳತಾದ ಕೊಕ್ಕನ್ನು ಕಲ್ಲು ಬಂಡೆಗೆ ಸವರಿ ಅದನ್ನು ಕಿತ್ತು ಹಾಕಿ ಬಡುತ್ತದೆ. ಅನಂತರದು ಹೊಸ ಕೊಕ್ಕು ಬೆಳೆಯುವವರೆಗೆ ತಾಳ್ಮೆಯಿಂದ ಕಾಯುತ್ತದೆ. ಹೊಸ ಕೊಕ್ಕು ಬೆಳೆದ ನಂತರ ಅತ್ಯಂತ ವೇದನೆ ಸಹಿಸಿ ಹಳೆಯ ಉಗುರುಗಳನ್ನು ಕಿತ್ತು ಹಾಕುತ್ತದೆ. ಹೊಸುಗುರು ಬೆಳೆಯಲಾರಂಭಿಸಿದ ನಂತರ ತನ್ನ ಪುಕ್ಕಗಳನ್ನು ಕಿತ್ತೆಳೆಯುತ್ತದೆ.

ಈ ವೇದನಾಯುಕ್ತ, ಸಹನಾಮಯ ಪ್ರಕ್ರಿಯೆ ಪೂರ್ಣಗೊಳ್ಳಲು ಸುಮಾರು ಆರು ತಿಂಗಳು ತಗಲುತ್ತದೆ. ಅದು ತನ್ನ ಕಠಿಣ ಶ್ರಮ, ಮಸೋದಾರ್ಢ್ಯತೆ ಮತ್ತು ಸಹನಶೀಲತೆಯನ್ನು ವ್ಯಯಿಸಿ ಈ 'ಬದಲಾವಣೆ'ಯನ್ನು ತನ್ನದಾಗಿಸಿಕೊಳ್ಳುತ್ತದೆ. ಹೊಸ ಕೊಕ್ಕು ಹೊಸ ಉಗುರು ಮತ್ತು ಹೊಸ ಪುಕ್ಕಗಳನ್ನು ಪಡೆದ ನಂತರ ಅದು ಮತ್ತಷ್ಟು ಉಮೇದಿನಂದ ಭೇಟೆಯಾಡಿ ಜೀವಿಸುವ ಛಲದೊಂದಿಗೆ ಮತ್ತೆ ಆಕಾಶಕ್ಕೆ ಲಗ್ಗೆಯಿಡುತ್ತದೆ.

ಮಾನವನ ಜೀವನವೂ ಅಂತೆಯೇ ಆಗಿದೆ. ಹಿತವಾದ ಬದುಕು ಬಾಳಬೇಕಾದರೆ ಹೊಸ ಬದಲಾವಣೆಗಳಿಗೆ ತನ್ನನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಈ ಹೊಸತನಕ್ಕೆ ಶತ್ರುವಾಗಿ ನಿಲ್ಲುವಂತಹ ಸಾಧನ ನಮ್ಮ ಹಳೆಯ ಚಾಳಿಯಾಗಿರಬಹುದು, ವಂಶಗತವಾಗಿ ಬಂದ ಜಾತಿ ಪದ್ಧತಿಯಂತಹ ಕಳಂಕವಾಗಿರಬಹುದು, ಬಲುವಳಿಯಾಗಿ ಸಿಕ್ಕ ಮಂಥನಕ್ಕೆ ಅವಕಾಶ ಕಲ್ಪಿಸದ ವಿಶ್ವಾಸವಾಗಿರಬಹುದು. ಇಂತಹ ಎಲ್ಲಾ ಹಳೆಯ ಹೊರೆಯನ್ನು ಕಿತ್ತೆಸೆದು ಭಾರವನ್ನು ಕಡಿಮೆಗೊಳಿಸಿ ಕೊಂಡಾಗ ಮಾತ್ರ 'ಹೊಸಭಾರ'ವನ್ನು ಹೊರುವ ಮತ್ತು 'ಬದಲಾವಣೆಯನ್ನು ಸ್ವೀಕರಿಸುವ ಕೆಚ್ಚು ಮನುಷ್ಯನಲ್ಲಿ ಮೂಡಲು ಸಾಧ್ಯವಿದೆ.

ಕೊನೆಯದಾಗಿ ಪವಿತ್ರ ಕುರ್‌ಆನ್‌ನ ವಾಕ್ಯವೊಂದನ್ನು ಈ ನಿಟ್ಟಿನಲಿ ಉದ್ಧರಿಸಬಯಸುತ್ತೇನೆ.

"ಅಲ್ಲಾಹನು ಯಾವುದೇ ಸಮುದಾಯಕ್ಕೆ ದಯಪಾಲಿಸಿರುವ ಅನುಗ್ರಹಗಳನ್ನು ಬದಲಿಸುವುದಿಲ್ಲ. ಅವರು ತಮ್ಮನ್ನು ತಾವು ಬದಲಿಸಿಕೊಳ್ಳುವವರೆಗೆ. ಇದು ಅಲ್ಲಾಹನ ಪರಿಪಾಠವಾಗಿದೆ" (ಪವಿತ್ರ ಕುರ್‌ಆನ್ 8:53)

ಬಿ.ಎಸ್. ಶರ್ಫುದ್ದೀನ್
ಅಧ್ಯಕ್ಷರು
ಕರ್ನಾಟಕ ಮುಸ್ಲಿಮ್ ವೆಲ್‌ಫೇರ್ ಅಸೋಸಿಯೇಶನ್, ಕುವೈಟ್
ಇಮೇಲ್ : sharaf_kuwait@yahoo.com